ಕರ್ನಾಟಕ ಸರ್ಕಾರ

# ವಾಣಿಜ್ಯ ತೆರಿಗೆಗಳ ಇಲಾಖೆ

## ಪ್ರಕಟಣೆ

**ತಕ್ಷಣದಿಂದ ಜಾರಿಗೆ ಬರುವಂತೆ** (ಸಂಸತ್ತು ಅನುಮೋದಿಸಿರುವ 2011ರ ವಿತ್ತ ಅಧಿನಿಯಮದಲ್ಲಿ 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 15ಕ್ಕೆ ಮಾಡಿದ ತಿದ್ದುಪಡಿಯೊಂದಿಗೆ 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ತಿದ್ದುಪಡಿಯಾದ ಪ್ರಕರಣ 4(1)(ಬಿ) ಮತ್ತು ಆರನೇ ಅನುಸೂಚಿಯೊಂದಿಗೆ ಓದಲಾದ ಕಾರಣದಿಂದಾಗಿ) **ಮುಂದಿನವುಗಳ ಮೇಲೆ ಶೇ. 4ರಿಂದ ಶೇ. 5ಕ್ಕೆ ಮೌಲ್ಯವರ್ಧಿತ ತೆರಿಗೆ ಹೆಚ್ಚಳ :**

(1) ಘೋಷಿತ ಸರಕುಗಳು ಅಂದರೆ, ಕಲ್ಲಿದ್ದಲು, ಹತ್ತಿ, ಹತ್ತಿಯ ನೂಲು, ಕಚ್ಚಾ ಎಣ್ಣೆ ಚರ್ಮಗಳು ಮತ್ತು ತೊಗಲುಗಳು, ಕಬ್ಬಿಣ ಮತ್ತು ಉಕ್ಕು, ಎಣ್ಣೆ ಬೀಜಗಳು (ವಿನಾಯಿತಿ ಹೊಂದಿರುವ ತೆಂಗಿನಕಾಯಿ ಹಾಗೂ ಶೇ. 2ರಂತೆ ತೆರಿಗೆಗೆ ಒಳಗಾಗುವ ಕೊಬ್ಬರಿ ಮತ್ತು ಒಣ ಕೊಬ್ಬರಿಯನ್ನು ಹೊರತುಪಡಿಸಿದಂತೆ), ಅನುಸೂಚಿತ ವೈಮಾನಿಕ ಸಂಸ್ಥೆಗಳು ನಿರ್ವಹಿಸುವ 40 ಸಾವಿರ ಕೆ.ಜಿ.ಗಳ ಗರಿಷ್ಠ ಭಾರಕ್ಕಿಂತ ಕಡಿಮೆ ಇರುವ ವಿಮಾನಗಳಿಗೆ ಮಾರುವ ವೈಮಾನಿಕ ಇಂಧನ; ಮತ್ತು

(2) ಪ್ಲಂಬಿಂಗ್, ಡ್ರೈನೇಜ್ ಮತ್ತು ಅಂತಹದೇ ಬಳಕೆಗಳನ್ನು ಹೊರತುಪಡಿಸಿದಂತೆ ಉಕ್ಕಿನ ಕೊಳವೆಗಳನ್ನು ಸರಬರಾಜು ಮತ್ತು ಹಾಸುವ ಕಾಮಗಾರಿ ಗುತ್ತಿಗೆ.

ವಾಣಿಜ್ಯ ತೆರಿಗೆಗಳ ಆಯುಕ್ತರು

**ದಿನಾಂಕ : 12.04.2011** (ಕರ್ನಾಟಕ)